## ಹಂಪಿ ಮಡಿಲಲ್ಲಿ ಮನೆಗಳ ದರ್ಬಾರ್!

ಹಂಪಿಯ ಚಕ್ರತೀರ್ಥ ಸಮೀಪ ದಿನನಿತ್ಯ ಪ್ರವಾಸಿಗರು ಮನೆಕಟ್ಟಲು ಮುಗಿಬೀಳುತ್ತಾರೆ! ಇವು ಪಾಯ ತೋಡಿ, ಲಕ್ಷಗಟ್ಟಲೆ ವೆಚ್ಚ ಮಾಡಿ ವರ್ಷವಿಡಿ ಕಟ್ಟುವ ಮನೆಗಳಲ್ಲ. ನಂಬಿಕೆಯ ತಳಹದಿಯ ಮೇಲೆ ಕೆಲವು ನಿಮಿಷಗಳಲ್ಲಿಯೇ ನಿರ್ಮಿಸುವ ಮನೆಗಳಿವು. ತುಂಗಭದ್ರೆಯಲ್ಲಿ ಪುಣ್ಯಸ್ನಾನ ಮಾಡಿ, ಆರಾಧ್ಯ ದೈವ ವಿರೂಪಾಕ್ಷೇಶ್ವರನನ್ನು ಮನದಲ್ಲಿ ನೆನೆಯುತ್ತಾ, ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಅಲ್ಲಿಯೇ ಬಿದ್ದ ಕಲ್ಲು, ಇಟ್ಟಿಗೆಗಳನ್ನು ಬಳಸಿ ಮನೆ ಕಟ್ಟಿತ್ತಾರೆ. ಇದರಿಂದ ತಮ್ಮ ಕೆಲಸಗಳು ಕೈಗೂಡುತ್ತವೆ ಎನ್ನುವ ನಂಬಿಕೆ ಪ್ರವಾಸಿಗರಲ್ಲಿ ಬಲವಾಗಿದೆ. ಈ ಕಾರಣಕ್ಕೆ ಇಲ್ಲಿ ಚಿಣ್ಣರಾದಿಯಾಗಿ ಎಲ್ಲರೂ ಮನೆಕಟ್ಟುತ್ತಾರೆ! ಇದರಿಂದ ಎಲ್ಲೆಡೆ ಚಿಕ್ಕ ಚಿಕ್ಕ ಮನೆಗಳ ದೊಡ್ಡ ಲೋಕ ಸೃಷ್ಟಿಯಾಗಿದೆ!

**ಚಿತ್ರ- ಬರಹ: ಸ್ವರೂಪಾನಂದ ಎಂ. ಕೊಟ್ಟೂರು, ಕೂಡ್ಲಿಗಿ**



## ಮೋಕ್ಷಧಾಮ

ಸುಡುಗಾಡು ಎಂದಾಗ ನಮ್ಮೆದುರು ಬರುವ ಭಯಾನಕ ಚಿತ್ರಕ್ಕೆ ವ್ಯತಿರಿಕ್ತವಾದ 'ಮೋಕ್ಷಧಾಮ' ವೊಂದನ್ನು ಉಜಿರೆಯ ರಾಮನಗರ (ಹಳೇಪೇಟೆ)ದಲ್ಲಿ ಕಾಣಬಹುದು. ನಳನಳಿಸುವ ಹೂ ಗಿಡಗಳು, ಹಚ್ಚಹಸಿರಿನ ಹುಲ್ಲುಹಾಸು, ಧ್ಯಾನಮಗ್ನ ಶಿವನ ಸುಂದರಮೂರ್ತಿ, ನಿರ್ಮಲವಾದ ಪರಿಸರ ಇಲ್ಲಿದೆ.

ದೂರವಾಣಿ ಕರೆ ಮಾಡಿದ ತಕ್ಷಣ ರಾಮ, ಲಕ್ಷ್ಮಣ, ಭರತರೆಂಬ ಸಮಾಜ ಸೇವಕರು ಧಾವಿಸಿ ಬಂದು ಶವದಹನಕ್ಕೆ ಬೇಕಾದ ಸಕಲ ವ್ಯವಸ್ಥೆಯನ್ನೂ ಮಾಡಿಕೊಡುತ್ತಾರೆ. ಊರಿನ ಹಾಗೂ ಪರವೂರಿನ ದಾನಿಗಳು ಮುಖ್ಯವಾಗಿ ಶ್ರೀ ಕ್ಷೇತ್ರದ ಧರ್ಮಸ್ಥಳದ ನೆರವಿನಿಂದ ಕಡುಬಡವರಿಗೂ ಹೊರೆಯಾಗದ ರೀತಿ ಶುಲ್ಕ ಇದೆ. ಕಂಬಳಿ ಹೊದ್ದು ಸಂಬಳಗೋಲು ಹಿಡಿದ ಹರಿಶ್ಚಂದ್ರನ ಪ್ರತಿಮೆಯೊಂದು 'ಜನನ ಮರಣಗಳು ಮನುಷ್ಯ ಸಹಜ. ಸಾವಿಲ್ಲದಿರುವುದು ಸತ್ಯಕ್ಕೆ ಮಾತ್ರ' ಎಂದು ಸಾರಿಹೇಳುತ್ತಾ ನಿಂತಿದೆ.

**ಚಿತ್ರ-ಬರಹ: ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**





## ಕಾಗದದ ಉರುಳೆಗಳ ರಥ

ಕಾಗದದ ಉರುಳೆಗಳನ್ನು ಬಳಸಿ ರಚಿಸಿದ ಗಣೇಶನ ರಥದ ಕಲಾಕೃತಿ. 350 ಉರುಳೆಗಳನ್ನು ಬಳಸಲಾಗಿದ್ದು ಬೆಂಗಳೂರಿನ ವಿ. ಜಯಂತ್ ಎ. ರಾವ್ ಇದನ್ನು ರಚಿಸಿದ್ದಾರೆ. ಅಂದಾಜು ಒಂದು ನೂರು ರೂಪಾಯಿ ಖರ್ಚಿನಲ್ಲಿ 2 ವಾರಗಳಲ್ಲಿ ರಚಿಸಿದ್ದಾರೆ.

**-ವಿ. ಮೋಹನ್ ಸುಂದರ್, ಬೆಂಗಳೂರು**



## ಮದುವೆಗೆ ಮೀನಿನ ಉಡುಗೊರೆ

ಇತ್ತೀಚೆಗೆ ಕೋಲ್ಕತ್ತಾದ ನನ್ನ ಸ್ನೇಹಿತನ ವಿವಾಹಕ್ಕೆ ತೆರಳಿದ್ದಾಗ ಮದುವೆಯಲ್ಲಿ ನಿಜವಾದ ಮೀನಿನ ಉಡುಗೊರೆ ಕೊಡುವ ವಿಧಾನ ನೋಡಿ ಚಕಿತಗೊಂಡೆ. ಅಲ್ಲಿ ನಡೆಯುವ ಪ್ರತಿ ಹಿಂದೂ ಮದುವೆಯಲ್ಲಿ ಮೀನನ್ನು ಉಡುಗೊರೆಯಾಗಿ ಕೊಡುವ ಶಾಸ್ತ್ರವಿದೆ. ಮದುಮಗ ಮದುಮಗಳಿಗೆ ಈ ರೀತಿ ಸಿಂಗರಿಸಿದ ಮೀನನ್ನು ಕೊಡುತ್ತಾನೆ. ಅದನ್ನು ಮದುವೆಯ ನಂತರ ಮದುಮಗಳು ಬೇಯಿಸಿ ಒಟ್ಟಿಗೆ ಆ ದಿನ ಸೇವಿಸುತ್ತಾರೆ. ಇದೊಂದು ವಿಶಿಷ್ಟ ಆಚರಣೆಯಾಗಿದ್ದು ಸಸ್ಯಾಹಾರಿಗಳಲ್ಲಿ ಈ ಒಂದು ಆಚರಣೆ ಕಂಡುಬರುವುದಿಲ್ಲ. ಮೀನಿನ ಜೊತೆಗೆ ಒಣ ಹಣ್ಣುಗಳ ಬುಟ್ಟಿ, ಸಿಹಿ ತಿನಿಸು ಕೂಡ ಕೊಡಲಾಗುತ್ತದೆ.

**-ಡಾ.ಕೆ.ವಿ.ಸಂತೋಷ್ ಹೊಳಲ್ಕರೆ, ಚಿತ್ರದುರ್ಗ**

## ಕಟ್ಟಿಗೆಯಲ್ಲಿ ದ್ವಿಚಕ್ರ ವಾಹನ

ಗುಜರಾತ್‌ನ ಬಾಗ್‌ಸಾರಾದ ರಾಜೇಶ್ ಎಂಬ ಕಾರ್ಪೆಂಟರ್ ಕಟ್ಟಿಗೆಯಲ್ಲಿ ದ್ವಿಚಕ್ರ ವಾಹನವನ್ನು ಸೂಕ್ಷ್ಮವಾಗಿ ಕೆತ್ತಿದ್ದು ಅನೇಕರ ಮನಸ್ಸನ್ನು ಗೆದ್ದಿದ್ದಾನೆ. ತೇಗದ ಕಟ್ಟಿಗೆಯಿಂದ ಇದನ್ನು ತಯಾರಿಸಲು ಆತನಿಗೆ ಮೂರು ತಿಂಗಳು ಹಿಡಿಯಿತು.

**-ಈರಣ್ಣ ಬೆಂಗಾಲಿ, ರಾಯಚೂರು**



## ಮುಚ್ಚಳಗಳಿಂದ ಶಿವಲಿಂಗ ಕಲಾಕೃತಿ

ಈ ಸಾರಿ ಮೈಸೂರು ದಸರಾದಲ್ಲಿ ರಚಿತವಾಗಿರುವ ಕಲಾಕೃತಿ. 5000 ಬಾಟಲ್ ಮುಚ್ಚಳಗಳಿಂದ ಅಲಂಕರಿಸಿದ ಶಿವಲಿಂಗ ಬಹಳ ಆಕರ್ಷಣೀಯವಾಗಿದೆ. ಈ ಕಲಾಕೃತಿಯನ್ನು ಮೈಸೂರು ವಸ್ತುಪ್ರದರ್ಶನದ ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ ಇಡಲಾಗಿದ್ದು, ಬನ್ನೂರಿನ ಭಾಗ್ಯ ಸುರೇಂದ್ರ ರಚಿಸಿದ್ದಾರೆ.

**ಚಿತ್ರ- ಬರಹ: ಬಿ.ಎಲ್. ಸುರೇಶ್, ಬನ್ನೂರು**

